ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ
BENGALURU CENTRAL UNIVERSITY
Central College Campus, Dr. B.R. Ambedkar Veedhi, Bengaluru – 560 001.
Ph. No.: 080 – 22131385, E-Mail: registrarbcu@gmail.com / bcuccb@gmail.com

ಸಂಖ್ಯೆ: ಬಿಸಿಯು/ಎಸ್‌ವೈಎನ್/1/ವಿಶೇಷ ಸಭೆ/2018-19/438

ದಿನಾಂಕ: 23.11.2018.

ಗೆ,

ಸಿಂಡಿಕೇಟ್ ಸದಸ್ಯರು,
ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ,
ಬೆಂಗಳೂರು

ಮಾನ್ಯರೇ

ವಿಷಯ: ದಿನಾಂಕ: 15-11-2018ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡವಳಿಗಳು.

********

ದಿನಾಂಕ: 15-11-2018ರಂದು ಪೂರ್ವಾಹ್ನ 11-00 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ
BENGALURU CENTRAL UNIVERSITY
Central College Campus, Dr. B.R. Ambedkar Veedhi, Bengaluru – 560 001.
Ph. No.: 080 – 22131385, E-Mail: registrarbcu@gmail.com / bcuccb@gmail.com

ಸಂಖ್ಯೆ: ಬಿಸಿಯು/ಎಸ್‌ವೈಎನ್/1/ವಿಶೇಷ ಸಭೆ/2018–19 ದಿನಾಂಕ: 23.11.2018.

**ದಿನಾಂಕ 15–11–2018 ರಂದು ಪೂರ್ವಾಹ್ನ 11.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು – 560001 ಇಲ್ಲಿ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡವಳಿಗಳು.**

ಹಾಜರಾದ ಸದಸ್ಯರು:

| | | |
|---|---|---|
| 1. | ಪ್ರೊ. ಎಸ್. ಜಾಫೆಟ್,<br>ಕುಲಪತಿಗಳು | ಸಭಾಧ್ಯಕ್ಷರು |
| 2. | ಪ್ರೊ: ಕೆ.ಟಿ. ಮಂಜುನಾಥ,<br>ಜಂಟಿ ನಿರ್ದೇಶಕರು<br>ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಪರವಾಗಿ | ಸದಸ್ಯರು |
| 3. | ಡಾ: ಅರವಿಂದ್ ಹೆಚ್.ಟಿ. | ಸದಸ್ಯರು |
| 4. | ಶ್ರೀ. ಹೆಚ್. ಆರ್. ಸತೀಶ್, | ಸದಸ್ಯರು |
| 5. | ಡಾ: ಶಾಂತಿ ರಾಜೇಂದ್ರ ಕುಮಾರ್, | ಸದಸ್ಯರು |
| 6. | ಡಾ: ಎಸ್. ಹರೀಶ್, | ಸದಸ್ಯರು |
| 7. | ಡಾ: ಅಶಾ ಗಣೇಶ್, | ಸದಸ್ಯರು |
| 8. | ಡಾ: ಲತಾ ಕುಮಾರಿ, | ಸದಸ್ಯರು |
| 9. | ಡಾ: ಪಿ.ಸಿ.ಜಾಫರ್<br>ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, | ಸದಸ್ಯರು |
| 10. | ಪ್ರೊ: ಲಿಂಗರಾಜ ಗಾಂಧಿ<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 11. | ಪ್ರೊ: ಎಂ. ರಾಮಚಂದ್ರ ಗೌಡ<br>ಕುಲಸಚಿವರು, | ಸದಸ್ಯ<br>ಕಾರ್ಯದರ್ಶಿಗಳು |

1. ಮೊದಲಿಗೆ, ಕುಲಸಚಿವರು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಮೊದಲನೆ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು ಹಾಗೂ ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ ತಮ್ಮ ಪರಿಚಯ ಮಾಡಿಕೊಡಲು ಕೋರಿದರು. ಅದರಂತೆ, ಸದಸ್ಯರು ತಮ್ಮ ಪರಿಚಯವನ್ನು ಮಾಡಿಕೊಂಡರು.

2. ನಂತರ ವಿಶ್ವವಿದ್ಯಾಲಯದಲ್ಲಿ ಜರುಗಿದ ವಿವಿಧ ಚಟುವಟಿಕೆಗಳ ಕುರಿತು ವಿವರಿಸುವಂತೆ ಕುಲಪತಿಗಳಿಗೆ ವಿನಂತಿಸಿದರು.

(ಅ) ಕುಲಪತಿಗಳು ಎಲ್ಲ ಸದಸ್ಯರನ್ನು ಮತ್ತೊಮ್ಮೆ ಸ್ವಾಗತಿಸುತ್ತಾ, ವಿಶ್ವವಿದ್ಯಾಲಯದ ಇತಿಹಾಸ ಹಾಗೂ ಬೆಳೆದುಬಂದ ವಿವಿಧ ಹಂತಗಳ ಕುರಿತು ಹೇಳುತ್ತಾ, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಕೇಂದ್ರ ಸ್ಥಾನವಾಗಿರುವ ಈ

ಸೆಂಟ್ರಲ್ ಕಾಲೇಜಿನ ಆವರಣದ ಭವ್ಯ ಇತಿಹಾಸ ಹಾಗೂ ಪರಂಪರೆಯನ್ನು ತಿಳಿಸಿದರು. 1858ರಲ್ಲಿ ಬೆಂಗಳೂರು ಹೈಸ್ಕೂಲ್ ಆಗಿ ನಂತರ ಮದ್ರಾಸ ಪ್ರೆಸಿಡೆನ್ಸಿಯ ಸೆಂಟ್ರಲ್ ಕಾಲೇಜಾಗಿ ಮುಂದೆ ಮೈಸೂರು ವಿಶ್ವವಿದ್ಯಾಲಯದ ಆಧೀನಕ್ಕೊಳಪಟ್ಟು ಆನಂತರ ಬೆಂಗಳೂರು ವಿಶ್ವವಿದ್ಯಾಲಯದ ಭಾಗವಾಗಿ ಈಗ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯವಾಗಿ ರಚನೆಯಾಗಿರುವುದನ್ನು ವಿವರಿಸಿದರು. ಸೆಂಟ್ರಲ್ ಕಾಲೇಜು ಪ್ರತಿ 50 ವರ್ಷಗಳಿಗೊಮ್ಮೆ ಸ್ಥಿತ್ಯಂತರಗಳನ್ನು ಕಂಡಿದೆ ಎಂದು ತಿಳಿಸಿದರು. ಸರ್.ಎಂ. ವಿಶ್ವೇಶರಯ್ಯ, ಶ್ರೀ ಸಿ.ರಾಜಗೋಪಾಲಾಚಾರಿ, ಶ್ರೀ. ಮಿರ್ಝಾ ಇಸ್ಮಾಯಿಲ್, ಡಾ: ಹೆಚ್. ನರಸಿಂಹಯ್ಯ, ಶ್ರೀ ಕುವೆಂಪು, ಶ್ರೀ ಎಸ್. ನಿಜಲಿಂಗಪ್ಪ, ಶ್ರೀ ಡಿ. ದೇವರಾಜ ಅರಸ್, ಡಾ: ಸಿ.ಎನ್.ಆರ್. ರಾವ್, ಡಾ: ಜಿ.ಎಸ್. ಶಿವರುದ್ರಪ್ಪ, ಡಾ: ಕಿರಣ್ ಕುಮಾರ್, ಡಾ: ಲಂಕೇಶ್, ಡಾ: ಚಿದಾನಂದಮೂರ್ತಿ ಮುಂತಾದ ಮೇಧಾವಿಗಳನ್ನು ಈ ಸಂಸ್ಥೆ ಕಂಡಿದೆ ಎಂದು ತಿಳಿಸಿ, ಈ ವಿಶ್ವವಿದ್ಯಾಲಯದ ಭವ್ಯ ಪರಂಪರೆಯನ್ನು ಉಳಿಸಿಕೊಂಡು, ಒಂದು ಮಾದರಿ ವಿಶ್ವವಿದ್ಯಾಲಯವಾಗಿ ನಿರ್ಮಾಣ ಮಾಡುವದು ತಮ್ಮ ಉದ್ದೇಶವೆಂದು ತಿಳಿಸಿದರು. ಘನ ಕರ್ನಾಟಕ ಸರ್ಕಾರ ತಮ್ಮನ್ನು ಕುಲಪತಿಯಾಗಿ ನೇಮಕ ಮಾಡಿರುವುದಕ್ಕೆ ಕೃತಜ್ಞತೆ ವಕ್ತಪಡಿಸಿ ಇದು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಅಭಿವೃದ್ಧಿಗಾಗಿ ದೊರೆತ ಅವಕಾಶವೆಂದು ಭಾವಿಸಿರುವುದಾಗಿ ತಿಳಿಸಿದರು.

(ಆ) ವಿಶ್ವವಿದ್ಯಾಲಯದ ಪ್ರಾರಂಭವಾದ ನಂತರ ಜರುಗಿದ ವಿವಿಧ ಚಟುವಟಿಕೆಗಳ ಕುರಿತು ಮಾನ್ಯ ಕುಲಪತಿಗಳು ಮಂಡಿಸಿದ ವರದಿಯನ್ನು ಈ ನಡವಳಿಯೊಂದಿಗೆ ಲಗತ್ತಿಸಲಾಗಿದೆ.

(ಇ) ಪರೀಕ್ಷಾ ವಿಭಾಗದ ಚಟುವಟಿಕೆಗಳ ಕುರಿತು ಪ್ರೊ: ಲಿಂಗರಾಜ ಗಾಂಧಿಯವರು ವಿವರಿಸುತ್ತಾ, ಒಂದು ವರ್ಷದ ಹಿಂದೆ ಕುಲಪತಿಗಳು ಪರೀಕ್ಷಾ ಕೈಪಿಡಿ (Exam Mannual) ಸಿದ್ಧಪಡಿಸಲು ತಮ್ಮ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಿದ್ದು, ಈಗ ಕರಡು ಪ್ರತಿ ಮುದ್ರಣಕ್ಕೆ ಸಿದ್ಧವಾಗಿದೆ ಎಂದು ತಿಳಿಸಿದರು. ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದ ಸಮಗ್ರ ವಿಧಿವಿಧಾನಗಳು ಈ ಕೈಪಿಡಿಯಲಿವೆ ಎಂದು ತಿಳಿಸಿದರು. ಈ ಕೈಪಿಡಿ ವಿಶ್ವವಿದ್ಯಾಲಯಕ್ಕೆ ಮತ್ತು ಮಹಾವಿದ್ಯಾಲಯಗಳಿಗೆ ಅತ್ಯಂತ ಉಪಯುಕ್ತ ಕೈಪಿಡಿಯಾಗಲಿದೆ ಎಂದು ತಿಳಿಸಿದರು. ಪರೀಕ್ಷಾ ವಿಭಾಗದ ಕೆಳಕಂಡ ಚಟುವಟಿಕೆಗಳ ಕುರಿತು ವಿವರಿಸಿದರು.

- Digitalization of the entire examination system – from the Admission data capturing to convocation.
- Formation of the Technical Advisory Committee for implementation of ICT in University Governance with a special focus on creating ICT infrastructure and e-Governance in Examination Management.
- Outsourcing of e-Governance and Result Processing.
- Constituted of BOAE and the BOE for different subjects.
- Examination notification issued and digital fee payment is introduced.
- Conduct of practical examinations online uploading of marks.
- Invited tender for procurement of answer booklets, hardware for computer and data center, kora cloth bags and have sought 4G exemption for printing of question papers.
- Conduct of workshops for principals and chairpersons of BOE on Examination procedures.

(ಉ) ಕುಲಸಚಿವರಾದ ಪ್ರೊ: ಎಂ.ರಾಮಚಂದ್ರಗೌಡ ಅವರು ವಿಶ್ವವಿದ್ಯಾಲಯದ ಸಿಬ್ಬಂದಿಗಳ ಕುರಿತು ವಿವರಿಸಿ, ಇದುವರೆಗೆ ಬೆಂಗಳೂರು ವಿಶ್ವವಿದ್ಯಾಲಯದಿಂದ ಯಾವುದೇ ಶಿಕ್ಷಕ ಅಥವಾ ಶಿಕ್ಷಕೇತರ ಸಿಬ್ಬಂದಿಗಳನ್ನು ನೀಡಿರುವುದಿಲ್ಲ ಎಂದು ತಿಳಿಸಿದರು. ಸುಮಾರು 100 ಹುದ್ದೆಗಳ ವರ್ಗಾವಣೆ ಆಗಬೇಕಾಗಿದೆ ಎಂದು ತಿಳಿಸಿ ಅವುಗಳಲ್ಲಿ 38 ಜನ ಈ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಲು ಒಪ್ಪಿಗೆ ನೀಡಿರುತ್ತಾರೆ. ಅವರ ವರ್ಗಾವಣೆ ಪ್ರಕ್ರಿಯೆ ಆಗಬೇಕಾಗಿದೆ ಎಂದು ತಿಳಿಸಿದರು. ಸಿಬ್ಬಂದಿಗಳ ಅನುಪಸ್ಥಿತಿಯಲ್ಲಿ ಕೆಲಸ ಕಾರ್ಯಗಳನ್ನು ಸುಗಮವಾಗಿ ಜರುಗಿಸಲು ವಿಶ್ವವಿದ್ಯಾಲಯದಿಂದ ಖಾಯಂ ಸಿಬ್ಬಂದಿಗಳ ವರ್ಗಾವಣೆ/ನೇಮಕವಾಗುವ ವರೆಗೆ ಅನುಭವವುಳ್ಳ ನಿವೃತ್ತ ಸಿಬ್ಬಂದಿಗಳನ್ನು ಹಾಗು ಗುತ್ತಿಗೆ ಆಧಾರದ ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ ನೇಮಕಮಾಡಿಕೊಳ್ಳಲಾಗಿದೆ, ಕಾಲೇಜು ಶಿಕ್ಷಣ ಇಲಾಖೆಯಿಂದ ಇಬ್ಬರು ಸಹಾಯಕ ಪ್ರಾಧ್ಯಾಪಕರ ಎರವಲು ಸೇವೆ ಪಡೆಯಲಾಗಿದೆ ಎಂದು ತಿಳಿಸಿದರು.

(ಊ) ಸಿಂಡಿಕೇಟ್ ಸದಸ್ಯರಾದ ಡಾ: ಪಿ.ಸಿ.ಜಾಫರ್, ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ಚರ್ಚೆಯಲ್ಲಿ ಪಾಲ್ಗೊಂಡು ಕೆಳಕಂಡ ಸಲಹೆಗಳನ್ನು ನೀಡಿದರು:

(1) ಜಮೀನಿಗೆ ಸಂಬಂದಿಸಿದ ದಾಖಲೆಗಳು, Commissioner for Land Revenue and Settlement ಕಛೇರಿಯಲ್ಲಿ ಲಭ್ಯವಿದ್ದು ಅಗತ್ಯ ದಾಖಲೆಗಳನ್ನು ಅವರಿಂದ ಪಡೆದು ದಾಖಲೆಯಲ್ಲಿ ಇಟ್ಟುಕೊಳ್ಳಲು ತಿಳಿಸಿದರು. ಈ ಕುರಿತು ವಿಧಾನಸೌಧದಲ್ಲಿರುವ Archives ಇಲಾಖೆಯಲ್ಲಿ ಮೂಲ ದಾಖಲೆಗಳು ಲಭ್ಯವಿರುತ್ತವೆ. ಮಧ್ಯಪ್ರದೇಶದ ಭೋಪಾಲ ನಗರದಲ್ಲಿ ಇರುವ Princely Archives ದಲ್ಲಿ ಎಲ್ಲಾ ಭೂ ದಾಖೆಲೆಗಳು ಲಭ್ಯವಿರುವುದಾಗಿ ಹೇಳಿ ಅಲ್ಲಿಂದಲೂ ಪಡೆಯಬಹುದೆಂದು ತಿಳಿಸಿ. ಜಮೀನು ಮತ್ತು ಕಟ್ಟಡಗಳ ದಾಖಲೆಗಳು ಬಹುಮುಖ್ಯವಾದ ದಾಖೆಲೆಗಳಾಗಿದ್ದು, ಅವುಗಳನ್ನು ಪಡೆದು ಈ ವಿಶ್ವವಿದ್ಯಾಲಯದ ಹೆಸರಿನಲ್ಲಿ ದಾಖಲೆಗಳ ಪರಿವರ್ತನೆ ಮಾಡಿಕೊಳ್ಳಬೇಕೆಂದು ತಿಳಿಸಿದರು

(2) ಪರೀಕ್ಷಾ ವಿಭಾಗ ಡಾ: ಲಿಂಗರಾಜ ಗಾಂಧಿಯವರ ನೇತೃತ್ವದಲ್ಲಿ ಕೈಕೊಂಡ ಕ್ರಮಗಳ ಕುರಿತು ಮೆಚ್ಚುಗೆ ವ್ಯಕ್ತಪಡಿಸುತ್ತಾ, ಪರೀಕ್ಷೆಗಳಿಗೆ ಸಂಬಂಧಿಸಿದ ದತ್ತಾಂಶಗಳನ್ನು ಎನ್.ಐ.ಸಿ ಅಥವಾ ಇ-ಗವರ್ನನ್ಸ್ ಡಾಟಾ ಸೆಂಟರ್‌ನಲ್ಲಿ ಶೇಖರಿಸಿಡುವದು ಉತ್ತಮವೆಂದು ತಿಳಿಸಿದರು. ಪರೀಕ್ಷಾ ವಿಭಾಗದ ಹಿರಿಯ ಅಧಿಕಾರಿಗಳು ಮಾಹಿತಿ ತಂತ್ರಜ್ಞಾನದ ನಿರ್ವಹಣೆಯಲ್ಲಿ ನಿರಂತರವಾಗಿ ತೊಡಗಿಸಿಕೊಳ್ಳಬೇಕೆಂದು ತಿಳಿಸಿ, ಕುಲಪತಿಗಳ ಅಧ್ಯಕ್ಷತೆಯಲ್ಲಿ ಪರೀಕ್ಷಾ ವಿಭಾಗದ ಹಿರಿಯ ಅಧಿಕಾರಿಗಳ ಹಾಗೂ ತಂತ್ರಜ್ಞರ ಸಭೆಯನ್ನು ಪ್ರತಿ ತಿಂಗಳು ಕರೆಯಬೇಕೆಂದು ತಿಳಿಸಿದರು.

(3) ವಿಶ್ವವಿದ್ಯಾಲಯದ ಪ್ರವೇಶ ಹಾಗೂ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಸರ್ಕಾರದ ಹಂತದಲ್ಲಿ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಅಗತ್ಯ ತಂತ್ರಜ್ಞಾನ ಲಭ್ಯವಿದ್ದು, ಅದನ್ನು ನೇರವಾಗಿ ಅಳವಡಿಸಿಕೊಳ್ಳಬಹುದು ಎಂದು ತಿಳಿಸಿದರು. ಈ ಕುರಿತು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಅಧಿಕಾರಿಗಳ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ತಂತ್ರಜ್ಞರ ಸಭೆ ಜರುಗಿಸ ಬಹುದೆಂದು ತಿಳಿಸಿ ಇದಕ್ಕಾಗಿ ಎಲ್ಲಾ ಸಹಕಾರ ನೀಡಲು ಸಿದ್ಧರಿರುವುದಾಗಿ ತಿಳಿಸಿದರು.

(4) ಪರಿಕ್ಷೆಗಳಿಗೆ ಸಂಬಂದಿಸಿದ ದತ್ತಾಂಶಗಳು ಅತ್ತಂತ ಸೂಕ್ಷ್ಮ ಹಾಗೂ ಮಹತ್ವಪೂರ್ಣವಾಗಿವೆ ಎಂದು ತಿಳಿಸಿ, ಅವುಗಳ ರಕ್ಷಣೆಗೆ ಹಾಗೂ ಸುರಕ್ಷತೆಗೆ ಕ್ರಮಕೈಕೊಳ್ಳಬೇಕೆಂದು ತಿಳಿಸಿದರು. ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡೆಕೊಳ್ಳುವಾಗ ಪ್ರತಿಯೊಂದು ಅಂಶಗಳನ್ನು ಸ್ಪಷ್ಟ ಹಾಗೂ ನಿಖರವಾಗಿ ನಮೂದಿಸಬೇಕೆಂದು ತಿಳಿಸಿದರು.

ಕುಲಸಚಿವರು (ಮೌ) ಅವರು, ಸದ್ಯಕ್ಕೆ ಎಲ್ಲಾ ವಿಧಿ ವಿಧಾನಗಳನ್ನು ಅನುಸರಿಸಿ, ಸ್ಥಳೀಯ ಸಂಸ್ಥೆಯಿಂದ ಸೇವೆ ಪಡೆಯುತ್ತಿದ್ದು, ಅಗತ್ಯವಾದ ಎಲ್ಲಾ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಳ್ಳಲಾಗಿದೆ ಎಂದು ತಿಳಿಸಿದರು. ಪರಿಕ್ಷಾ ವಿಭಾಗದ ತಂತ್ರಜ್ಞಾನ ಕುರಿತಂತೆ ಮಹಾವಿದ್ಯಾಲಯಗಳಿಗೆ ಮನವರಿಕೆ ಮಾಡಿಕೊಡಲು ಮೂರು ಕಾರ್ಯಗಾರಗಳನ್ನು ಜರುಗಿಸಲಾಗಿದೆ ಎಂದು ತಿಳಿಸಿದರು.

**ಸಭೆಯು ಕುಲಪತಿಗಳು, ಕುಲಸಚಿವರು ಹಾಗೂ ಕುಲಸಚಿವರು (ಮೌಲ್ಯಮಾಪನ) ಇವರುಗಳು ಮಂಡಿಸಿದ ವಿವರಗಳನ್ನು ಗಮನಿಸಿ ಹಾಗೂ ಮಾನ್ಯ ಸದಸ್ಯರಾದ ಡಾ: ಪಿ.ಸಿ. ಜಾಫರ್ ರವರು ನೀಡಿದ ಸಲಹೆಗಳಿಗೆ ಅನುಮೋದನೆ ನೀಡಿತು.**

## 3. ಅಧ್ಯಕ್ಷರ ಅನುಮತಿ ಮೇರೆಗೆ ಇತರ ವಿಷಯಗಳು.

3(ಅ) ಸದಸ್ಯರಾದ ಡಾ. ಪಿ.ಸಿ. ಜಾಫೆರ ರವರು ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

1. ವಿಶ್ವವಿದ್ಯಾಲಯ ಕೈಕೊಂಡ ಕ್ರಮಗಳ ಕುರಿತು ಮೆಚ್ಚುಗೆ ಸೂಚಿಸಿ ಇದಕ್ಕಾಗಿ ಅಧಿಕಾರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಿದರು.

2. ಸರ್ಕಾರದ ಹಂತದಲ್ಲಿ ಕೆಲಸಗಳು ಶೀಘ್ರವಾಗಿ ಆಗದೇ ಇರುವುದಕ್ಕೆ ಬೇಜಾರು ಮಾಡಿಕೊಳ್ಳದೆ ವಿಶ್ವವಿದ್ಯಾಲಯ ತನ್ನ ಪ್ರಯತ್ನವನ್ನು ಮುಂದುವರೆಸಬೇಕೆಂದು ಹೇಳಿದರು.

3. ವಿಶ್ವವಿದ್ಯಾಲಯದಲ್ಲಿ ಕ್ಯಾಂಪಸ್ ಡೆವಲಪಮೆಂಟ್ ಸಮಿತಿ ಇರುವದು ಶ್ಲಾಘನೀಯ ಎಂದು ತಿಳಿಸಿ ಈ ಸಮಿತಿಯಲ್ಲಿ Conservation Architect ಇರುವದನ್ನು ಖಚಿತಪಡಿಸಿಕೊಳ್ಳಬೇಕೆಂದು ತಿಳಿಸಿದರು.

**ಕುಲಪತಿಗಳು ಈಗಾಗಲೇ Conservation Architect ಡಾ. ಚಂದ್ರಶೇಖರ ಹರಿಹರನ್ ರವರು ಇರುತ್ತಾರೆಂದು ತಿಳಿಸಿದರು.**

4. ವಿಶ್ವವಿದ್ಯಾಲಯ ಶೈಕ್ಷಣಿಕ ವೇಳಾಪಟ್ಟಿಯನ್ನು ಮುಂಚಿತವಾಗಿ ಪ್ರಕಟಿಸಿ ಅದಕ್ಕೆ ಬದ್ಧರಾಗಿರಬೇಕೆಂದು ತಿಳಿಸಿದರು. ಪ್ರಸ್ತುತ ಲಭ್ಯವಿರುವ ತಂತ್ರಜ್ಞಾನದಿಂದಾಗಿ ಪ್ರವೇಶ, ಪರೀಕ್ಷೆ, ಮೌಲ್ಯಮಾಪನ, ಫಲಿತಾಂಶ ಪ್ರಕಟಣೆ ಇತ್ಯಾದಿ ಕೆಲಸಗಳು ತ್ವರಿತವಾಗಿ ಆಗುವುದರಿಂದ ಶೈಕ್ಷಣಿಕ ವೇಳಾಪಟ್ಟಿಯ ಪ್ರಕಾರ ಕಾರ್ಯನಿರ್ವಹಣೆ ಸುಗಮವಾಗಲಿದೆ, ಉತ್ತರ ಪತ್ರಿಕೆಗಳನ್ನು ಸ್ಕ್ಯಾನ್ ಮಾಡಿ ಡಿಜಿಟಲ್ ಇಮೇಜ ಮೂಲಕ ಮೌಲ್ಯಮಾಪನ ಮಾಡಿಸಿದಲ್ಲಿ ಪರೀಕ್ಷಾ ಫಲಿತಾಂಶ ಬೇಗ ಪ್ರಕಟಿಸಬಹುದೆಂದು ತಿಳಿಸಿದರು.

5. ಪ್ರಸ್ತುತ ಸಂದರ್ಭದಲ್ಲಿ ಕೆಲವು ವಿಶ್ವವಿದ್ಯಾಲಯಗಳನ್ನು ಹೊರತುಪಡಿಸಿದರೆ, ಉಳಿದೆಲ್ಲ ವಿಶ್ವವಿದ್ಯಾಲಯಗಳು ಸಂಶೋಧನೆ ಮತ್ತು ವಿಸ್ತರಣೆ (Research & Extension) ಗಳಲ್ಲಿ ಹೆಚ್ಚಿನ ಆಸಕ್ತಿ ತೋರುತ್ತಿಲ್ಲವೆಂದು ತಿಳಿಸಿ, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ ಈ ಕುರಿತು ಗಮನ ಹರಿಸಬೇಕೆಂದು ತಿಳಿಸಿದರು.

6. ಅಂತರ ಶಿಸ್ತೀಯ (ಇಂಟರ್ ಡಿಸಿಪ್ಲಿನರಿ) ವ್ಯಾಸಂಗವನ್ನು ಮತ್ತು Research Methodology paper ನ್ನು ಸ್ನಾತಕೋತ್ತರ ಮಟ್ಟದಲ್ಲಿ ಅಳವಡಿಸಿಕೊಳ್ಳಲು ಕ್ರಮ ಕೈಕೊಳ್ಳಬೇಕೆಂದು ತಿಳಿಸಿದರು.

7. Public Policy ಮತ್ತು Data Analytical Skills ವಿಷಯಗಳನ್ನು ಬೋಧಿಸುವುದಕ್ಕೆ ಅಗತ್ಯ ಕ್ರಮಕೈಕೊಳ್ಳ ಬೇಕೆಂದು ತಿಳಿಸಿದರು.

8. Job Market (ಉದ್ಯೋಗ ಮಾರುಕಟ್ಟೆ) ಯೊಂದಿಗೆ ಸಂಪರ್ಕ ಹೊಂದಲು ಕ್ರಮಕೈಕೊಳ್ಳಲು ತಿಳಿಸಿದರು.

9. ವಿಶ್ವವಿದ್ಯಾಲಯ ಆಯೋಜಿಸಿದ ವಿದ್ಯಾರ್ಥಿಗಳ ಹಾಗೂ ಶಿಕ್ಷಕರ Orientation Programme ಬಹಳ ಒಳ್ಳೆಯ ಯೋಜನೆ ಆಗಿದ್ದು ಇದರಿಂದ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದ ಬಗ್ಗೆ ಅಭಿಮಾನ ಗೌರವ ಹಾಗೂ ಆತ್ಮೀಯತೆ ಉಂಟಾಗುವುದು ಅದನ್ನು ಮುಂದುವರೆಸಿಕೊಂಡು ಹೋಗಬೇಕೆಂದು ತಿಳಿಸಿದರು.

ಈ ಕುರಿತು ಯಾವುದೇ ಸಹಕಾರ ನೀಡಲು ತಾವು ಸದಾ ಸಿದ್ಧರಿರುವುದಾಗಿ ತಿಳಿಸಿದರು.

**ಮಾನ್ಯ ಸದಸ್ಯರು ನೀಡಿದ ಸಲಹೆಗಳನ್ನು ಸಭೆಯು ಸ್ವಾಗತಿಸಿ ಅವುಗಳನ್ನು ಪರಿಶೀಲಿಸಿ ಅಗತ್ಯ ಕ್ರಮ ಕೈಕೊಳ್ಳಬೇಕೆಂದು ತೀರ್ಮಾನಿಸಿತು.**

3(ಅ) ಪ್ರೊ: ಕೆ.ಟಿ. ಮಂಜುನಾಥ, ಜಂಟಿ ನಿರ್ದೇಶಕರು ಮಾತನಾಡುತ್ತ, ಸಿಂಡಿಕೇಟಿಗೆ ನಾಮನಿರ್ದೇಶನ ಮಾಡುವ ನಾಲ್ಕು ಜನ ಪ್ರಾಂಶುಪಾಲರುಗಳಲ್ಲಿ ಸರ್ಕಾರಿ ಮಹಾವಿದ್ಯಾಲಯದಿಂದ ಒಬ್ಬರು ಪ್ರಾಂಶುಪಾಲರಿಗೆ ಪ್ರಾತಿನಿಧ್ಯ ಕೊಡಬೇಕೆಂದು ಕೋರಿದರು. ಇದಕ್ಕೆ ಕುಲಸಚಿವರು ನಿಯಮಗಳಲ್ಲಿ ಸರ್ಕಾರಿ, ಅನುದಾನಿತ, ಅನುದಾನರಹಿತ ಮಹಾವಿದ್ಯಾಲಯಗಳನ್ನು ಪ್ರತ್ಯೇಕವಾಗಿ ಪರಿಗಣಿಸಲು ಅವಕಾಶವಿಲ್ಲವೆಂದು ತಿಳಿಸಿದರು. **ಕುಲಪತಿಗಳು ನಿಯಮಾವಳಿಗಳಲ್ಲಿ ಇರುವ ಅವಕಾಶಗಳ ಕುರಿತು ಪರಿಶೀಲಿಸಿ ಅಗತ್ಯ ಕ್ರಮಕೈಕೊಳ್ಳುವುದಾಗಿ ತಿಳಿಸಿದರು.**

3(ಇ) **ಮಾನ್ಯ ಸದಸ್ಯರಾದ ಶ್ರೀ ಹೆಚ್.ಟಿ. ಅರವಿಂದ ಅವರು ಕೆಳಗೆ ನಮೂದಿಸಿದ ವಿಷಯಗಳ ಕುರಿತು ಪ್ರಸ್ತಾಪಿಸಿದರು.**

1. ಶೈಕ್ಷಣಿಕ ವೇಳಾಪಟ್ಟಿಯನ್ನು ಮುಂಚಿತವಾಗಿ ಪ್ರಕಟಿಸಿ ಅದು ಅನುಷ್ಠಾನವಾಗುವಂತೆ ನೋಡಿಕೊಳ್ಳಬೇಕೆಂದು ತಿಳಿಸಿದರು.
2. ಯಾವುದೇ ಹೊಸ ಯೋಜನೆ ಅಥವಾ ಪದ್ಧತಿ ಜಾರಿಯಲ್ಲಿ ತರುವಾಗ ಆ ಕುರಿತು ಸಂಬಂಧಿಸಿದ ತಜ್ಞರೊಂದಿಗೆ ಹಾಗೂ ಫಲಾನುಭವಿಗಳೊಂದಿಗೆ ಸಮಾಲೋಚನೆ ಮಾಡಬೇಕೆಂದು ತಿಳಿಸಿದರು.
3. ವಿದ್ಯಾರ್ಥಿ ಪ್ರತಿನಿಧಿಗಳನ್ನು ಪ್ರಾಧಿಕಾರಗಳಿಗೆ ನಾಮನಿರ್ದೇಶನ ಮಾಡುವ ಕುರಿತು ಪರಿಶೀಲಿಸಬೇಕೆಂದು ತಿಳಿಸಿದರು.

4. ಸಕಾಲ ಯೋಜನೆ ಪ್ರಕಾರ ವಿವರಗಳನ್ನು ಪ್ರಕಟಿಸಬೇಕೆಂದು ತಿಳಿಸಿದರು.
5. ವಿದ್ಯಾರ್ಥಿಗಳ ಕುಂದುಕೊರತೆಗಳ ಪರಿಹಾರಕ್ಕಾಗಿ ಒಂದು ಘಟಕ ಸ್ಥಾಪಿಸಬೇಕೆಂದು ತಿಳಿಸಿದರು.
6. ಪರೀಕ್ಷಾ ಕೈಪಿಡಿಯನ್ನು ಆದಷ್ಟು ಬೇಗನೆ ಪ್ರಕಟಿಸಿ ಮಹಾವಿದ್ಯಾಲಯಗಳಿಗೆ ಒದಗಿಸಬೇಕೆಂದು ಹಾಗೂ ಇದನ್ನು ವೆಬ್ ಸೈಟ್ ನಲ್ಲಿ ಪ್ರಕಟಿಸಬೇಕೆಂದು ಆಗ್ರಹಿಸಿದರು.

ಸದಸ್ಯರಾದ ಮಾನ್ಯ ಡಾ: ಪಿ.ಸಿ. ಜಾಫರ್ ರವರು ಪರೀಕ್ಷಾ ಕೈಪಿಡಿಯಲ್ಲಿ ಇರಬಹುದಾದ ಕೆಲವು ಗೌಪ್ಯ ಮಾಹಿತಿಗಳನ್ನು ಸಾರ್ವಜನಿಕ ಜಾಲತಾಣಗಳಲ್ಲಿ ಪ್ರಕಟಿಸುವದು ಉಚಿತವಲ್ಲವೆಂದು ತಿಳಿಸಿದರು.

**ಕುಲಪತಿಗಳು ಮಾನ್ಯ ಸದಸ್ಯರು ನೀಡಿರುವ ಸಲಹೆಗಳ ಕುರಿತು ಪರಿಶೀಲಿಸಿ ಅಗತ್ಯ ಕ್ರಮ ಕೈಕೊಳ್ಳುವುದಾಗಿ ತಿಳಿಸಿದರು.**

3(ಈ) ಮಾನ್ಯ ಸದಸ್ಯರಾದ ಶ್ರೀ. ಹೆಚ್. ಆರ್. ಸತೀಶ್, ಅವರು ಸಿವಿಲ್ ಇಂಜನಿಯರಾಗಿದ್ದು ಹಲವು ಸಂಸ್ಥೆಗಳಿಗೆ ಸಲಹೆಗಾರರಾಗಿ ಸೇವೆ ಒದಗಿಸುತ್ತಿದ್ದು ಈ ವಿಶ್ವವಿದ್ಯಾಲಯದ ಸಂಬಂದಪಟ್ಟ ಸಮಿತಿಗೆ ಸದಸ್ಯರಾಗಿ ನೇಮಕಮಾಡಿ ತಮ್ಮ ಸೇವೆಯನ್ನು ಪಡೆಯ ಬಹುದೆಂದು ತಿಳಿಸಿದರು.

**ಕುಲಪತಿಗಳು ವಿವಿಧ ಸಮಿತಿಗಳ ನೇಮಕಮಾಡುವಾಗ ಪರಿಗಣಿಸುವುದಾಗಿ ತಿಳಿಸಿದರು.**

ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-
**ಕುಲಸಚಿವರು**

ಸಹಿ/-
**ಕುಲಪತಿಗಳು**

// ಪ್ರತಿ //

ಕುಲಸಚಿವರು